ಫಾರೆಸ್ಟ್ ಇಲಾಖಾ.

ನೋಟಿಫಿಕೇಷ್ನ.

ತಾರೀಖು 10ನೆ ಮೇ 1909, ಮೊಕ್ಕಾಂ ಚನ್ನಪಟ್ಟಣ.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಬೆಂಗಳೂರು ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕು ಗಳಲ್ಲಿರುವ ಸ್ಟೇಟ್ ಫಾರೆಸ್ಟ್ (ಕತರಾವಣೆ ಆದ ಕೂಪುಗಳು ವಿನಹ) ಮತ್ತು ಕಮಿಷಿರಿಯಟ್ ಕಾವಲುಗಳು ಸೇರಿಸಿಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನ್‌ಗಳಲ್ಲಿಯೂ (ಪ್ಲಾಂಟೇಷ್ನ್‌ಗಳ ವಿನಹ) ಸಹಾ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1909ನೆ ಜುಲೈ 1ನೆ ತಾರೀಖು ಲಾಗಾಯತು 1911ನೆ ಇಸವಿ ಜೂನ್ ಆಖೈರ್ ವರಿಗೆ ಜಮಾಯಿಸಿ ತೆಗದುಕ್ಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1909ನೆ ಇಸವಿ ಜೂನ್ ತಾರೀಖು 7ರಲ್ಲಿ ಬೆಂಗಳೂರು ಮೊಕ್ಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರವರೊಂದಿಗೆ ಆಗಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ತಾಲ್ಲೂಕ್‌ವಾರ್ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುತ್ತಾರೆ.

1—7—1909ರ ಲಾಗಾಯತು 30—6—1911ರ ವರಿಗೆ.

(1) ಬೆಂಗಳೂರು	(6) ಕೊಲ್ಲೇಸೇಟೆ ಸ॥ ತಾ॥
(2) ದೇವನಹಳ್ಳಿ	(7) ಕಾನಕಾನಹಳ್ಳಿ
(3) ಚನ್ನಪಟ್ಟಣ	(8) ಮಾಗಡಿ
(4) ಹೊಸಕೋಟೆ	(9) ಆನೇಕಲ್
(5) ನೆಲಮಂಗಲ	(10) ದೊಡ್ಡಬಳ್ಳಾಪುರ

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜ್ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣಿ ಹಕ್ಕನ್ನು ಚಡದರಖಾಸ್ತುದಾರನಿಗೆ ವಿೞವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನು ಡೆಪ್ಯುಟಿ ಕಮಿಷನರವರು ತಾವೆ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡದ ಏಜಂಟ್ ಯಾ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತುದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ತೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಮೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಚಡದರಖಾಸ್ತುದಾರು ಹರಾಜು ಮಂಜೂರಾದ ಸಂಗತಿ ತಮಗೆ ತಿಳಿಸಿದ ಐದು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿಸಿ ಒಟ್ಟು ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ತೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಯ ನಡಿಸುವ ಆಫಿಸರರಿಂದ ಸದರೀ ಬಾಬ್ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರ ಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಆವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳ ಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಅಲ್ಲದೆ 100 ರೂಪಾಯಿಗಳನ್ನು ತೇವಣಿ ಇಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಏಳು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದುಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ-ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಎಂಟು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವರಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1909ನೆ ಇಸವಿ ಆಗಸ್ಟ್ 1ನೆ ತಾರೀಖು, 2ನೆ ಖಿಸ್ತು 1909ನೆ ಇಸವಿ ಅಕ್ಟೋಬರ್ 1ನೆ ತಾರೀಖು, 3ನೆ ಖಿಸ್ತು 1910ನೆ ಇಸವಿ ಜನವರಿ 2ನೆ ತಾರೀಖು, 4ನೆ ಖಿಸ್ತು 1910ನೆ ಇಸವಿ ಏಪ್ರಿಲ್ 1ನೆ ತಾರೀಖು, 5ನೆ ಖಿಸ್ತು 1910ನೆ ಇಸವಿ ಜುಲೈ 1ನೆ ತಾರೀಖು, 6ನೆ ಖಿಸ್ತು 1910ನೆ ಇಸವಿ ಅಕ್ಟೋಬರ್ 1ನೆ ತಾರೀಖು, 7ನೆ ಖಿಸ್ತು 1911ನೆ ಇಸವಿ ಜನವರಿ 2ನೆ ತಾರೀಖು, 8ನೆ ಖಿಸ್ತು 1911ನೆ ಏಪ್ರಿಲ್ 1ನೆ ತಾರೀಖು, ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆ ಗಳ ಜಮಾವಣಿ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಬಂದು ವರುಷಕ್ಕೆ ಬಳಿಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜವಾವಣೆ ಬಗ್ಯೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರುಗಳ ಹೆಸರನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾ ಮಾಡಿ ಇಡುವ ಜಾಗಾಗಳ ಬಂದು ಪಟ್ಟಯನ್ನು ಇಜಾರೆದಾರನು ಕೊಡತಕ್ಕದ್ದು.

(4) ತೊಗಟೆ ತೆಗದನಂತರ ಬೆಳೆಯುವ ಆ ಸಂಬಂಧವಾದ ವಿಷಯ ಸೌದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟಿನಲ್ಲಿ ಚಕ್ಕೆಯನ್ನು ಜವಾಯಿಸಬೇಕಾದರೆ ಅವುಗಳ ಚಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟ್ ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟುಗಳ ಭಾಗಗಳಲ್ಲಿ ಚಕ್ಕೆ ಜವಾವಣೆ ಕೆಲಸ ನಡಿಸಕೂಡದು.

(7) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಕಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಕವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿಬಂದು ಗಾಡಿ ಬೋಜು ಚಕ್ಕೆಗೂ ಡಿಸ್ಟ್ರಿಕ್ಟ ಆಫಿಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರೆದಾರನು ಪಾಸ್ ಪಡೆಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋರಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾ ಮಾಡಿರುವ ಎಲ್ಲಾ ಚಕ್ಕೆಗಳನ್ನು 15-7-1911 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಬಂದು ಷರತ್ತಿಗೆ ಇಜಾರೆದಾರನು ತಪ್ಪು ನಡದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರೆವಿಗೂ ಜವಾಯಿಸಿ ಇರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು ಮತ್ತು ಇಜಾರೆದಾರನಿಂದ ಪಾವತಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಮೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮಿಷನರವರಿಂದ ತೀರ್ಮಾನಿಸಲ್ಪಡಬಹುದಾದ ಮೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ.

ತಿದ್ದುಪಾಟಾದ ಇಸ್ತಿಹಾರ್ನಾಮಾ, ತಾರೀಖು 10ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ಸರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉದ್ಯಾನವನ.	31—5—09	ಸಾಗ್ವಾನಿ ನಾಟಾ ...	600	20,000	ಕಚ್ಚಾ ಕಡಿಪು ತಾರೀಖು 19—10—09ಕ್ಕೆ ಆಗುವದು.
			ಡಿಟೋ ಜಂತಿಗಳು ...	300	4,000	
			ಹೊನ್ನೆ ನಾಟಾ ...	100	2,500	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟಾ	100	3,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟಾ ...	25	1,000	
			ಕಾಡು ನಾಟಾ ...	25	500	
2	ನಂಜನಗೂಡು ...	1—6—09	ಸಾಗುವಾನಿ ನಾಟಾ ...	50	1,500	
			ಡಿಟೋ ಜಂತಿಗಳು ...	50	500	
			ಹೊನ್ನೆ ನಾಟಾ ...	100	2,000	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟಾ ...	50	1,000	
			ಡಿಟೋ ಜಂತಿಗಳು ...	10	120	
			ಬೀಟೆ ನಾಟಾ ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟಾ ...	20	500	